**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು**

ದಿನಾಂಕಃ 02ನೇ ಜುಲೈ ತಿಂಗಳು 2025ರಂದು

**ಸಿಸಿ ನಂ.157/2024**

| | |
|---|---|
| **ಫಿರ್ಯಾದುದಾರಃ** | ಡಿ.ಮಂಜುನಾಥ, ಬಿನ್ ದಾಸಪ್ಪ,<br>ವಯಸ್ಸು 40 ವರ್ಷ, ವಾಸಃ ರಂಗನಾಥ<br>ಬಡಾವಣೆ, ಕಲ್ಕುಣಿಕೆ, ಹುಣಸೂರು ಟೌನ್. |

**– ವಿರುದ್ಧ –**

| | |
|---|---|
| **ಆರೋಪಿಃ** | ಮಂಜುನಾಥ ಎಂ.ಆರ್., ಬಿನ್ ರಾಮಚಂದ್ರ,<br>ವಯಸ್ಸು 42 ವರ್ಷ, ವಾಸಃ ಕರೀಗೌಡರ ಬೀದಿ,<br>ಶನೀಶ್ವರ ಸ್ವಾಮಿ ದೇವಸ್ಥಾನದ ಹಿಂದೆ, ಹುಣಸೂರು ಟೌನ್. |

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 251 ರ ಅಡಿಯಲ್ಲಿ ಆರೋಪಣಾ ಸಾರಾಂಶ**

ಆರೋಪಿಯಾದ ನೀವು ಮತ್ತು ಫಿರ್ಯಾದುದಾರರಾದ ಮಂಜುನಾಥ್ ಡಿ ರವರು ತುಂಬಾ ವರ್ಷಗಳಿಂದ ಪರಿಚಯಸ್ಥರಾಗಿದ್ದು, ಸದರಿ ಪರಿಚಯದ ಆಧಾರದ ಮೇಲೆ ನೀವು ದಿನಾಂಕಃ 10.10.2023ರಂದು ಫಿರ್ಯಾದುದಾರರನ್ನು ಭೇಟಿಯಾಗಿ ನಿಮ್ಮ ಕಾನೂನು ಬದ್ಧ ಅವಶ್ಯಕತೆಗಾಗಿ ಅಂದರೆ ವ್ಯಾಪಾರದ ಸಲುವಾಗಿ ಅವರಿಂದ ರೂ.2,00,000/- ಗಳನ್ನು ಅಲ್ಪಾವಧಿಯೊಳಗೆ ತೀರಿಸುವುದಾಗಿ ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲದ ತೀರುವಳಿಗಾಗಿ ದಿನಾಂಕಃ 13.11.2023 ರಂದು ಪಾವತಿಯಾಗುವಂತೆ Esaf Small Finance Bank, ಹುಣಸೂರು ಶಾಖೆಯ ಚೆಕ್ ಸಂಖ್ಯೆ 000004 ಅನ್ನು ರೂ.2,00,000/-ಗಳಿಗೆ ನೀಡಿದ್ದು, ಅದನ್ನು ಫಿರ್ಯಾದಿದಾರರು ತಮ್ಮ ಖಾತೆ ಹೊಂದಿರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಮೂಲಕ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ "ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ" ಎಂಬ ಕಾರಣಕ್ಕಾಗಿ ಸದರಿ ಚೆಕ್ ದಿನಾಂಕ 17.11.2023ರ

ಬ್ಯಾಂಕಿನ ಹಿಂಬರಹದೊಂದಿಗೆ ವಾಪಾಸಾಗಿದ್ದು, ಈ ಬಗ್ಗೆ ಫಿರ್ಯಾದಿದಾರರು ನಿಮಗೆ ವಿಷಯ ತಿಳಿಸಿದಾಗ ನೀವು 1 ತಿಂಗಳ ಕಾಲಾವಶ ಕೋರಿದ್ದು, ನಂತರ ಪುನಃ ಚೆಕ್ ನ್ನು ನಗದೀಕರಣಕ್ಕಾಗಿ ಹಾಜರುಪಡಿಸುವಂತೆ ಹೇಳಿದ್ದು, ಅದರಂತೆ ಫಿರ್ಯಾದುದಾರರು ದಿನಾಂಕಃ 08.01.2024 ರಂದು ಪುನಃ ಚೆಕ್ ನ್ನು ಅದೇ ಬ್ಯಾಂಕಿನ ಮೂಲಕ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ "Drawers Signature Differs" ಎಂಬ ಹಿಂಬರಹದೊಂದಿಗೆ ದಿನಾಂಕಃ 09.01.2024ರಂದು ವಾಪಾಸ್ಸಾಗಿದ್ದು, ಈ ಬಗ್ಗೆ ಫಿರ್ಯಾದುದಾರರು ದಿನಾಂಕ 25.01.2024 ರಂದು ತಮ್ಮ ವಕೀಲರ ಮೂಲಕ ನೋಂದಾಯಿತ ಅಂಚೆಯಲ್ಲಿ ನಿಮ್ಮ ವಿಳಾಸಕ್ಕೆ ನೋಟೀಸು ನೀಡಿದ್ದು, ಸದರಿ ನೋಟೀಸಿನ ಬಗ್ಗೆ ನಿಮಗೆ ಮಾಹಿತಿ ಇದ್ದರೂ ಕೂಡ ನೀವು ಚೆಕ್ ನಲ್ಲಿ ನಮೂದಿಸಿದ ಹಣವನ್ನಾಗಲೀ ನೋಟೀಸಿಗೆ ಉತ್ತರವನ್ನಾಗಲೀ ನೀಡದೆ ಇರುವುದರಿಂದ ನೀವು ನೆಗೋಷಿಯೇಬಲ್ ಇನ್ ಸ್ಟ್ರುಮೆಂಟ್ಸ್ ಕಾಯ್ದೆಯ ಕಲಂ 138ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

| | |
|---|---|
| ಪ್ರಶ್ನೆಃ1 | ನಿಮಗೆ ತಿಳಿದಿರುವ ಭಾಷೆಯಲ್ಲಿ ಓದಿ ವಿವರಿಸಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ? |
| ಉತ್ತರಃ | ತಿಳಿಯಿತು |
| ಪ್ರಶ್ನೆಃ 2 | ನೀವು ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಬಯಸುವಿರಾ? |
| ಉತ್ತರಃ | ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು. |

ಮೇಲ್ಕಾಣಿಸಿದ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ANITHA

Digitally signed by ANITHA
Date: 2025.07.02 17:33:32 +0530

(ಅನಿತ)

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ., ಹುಣಸೂರು.**

ಆರೋಪಿಯ ಸಹಿಃ